ಕೇಂದ್ರಗಳ ಮೂಲಕ ಮಾಡುವುದು.

7. ರೇಷ್ಮೆ ಗೂಡಿನ ಮಾರುಕಟ್ಟೆ ಮತ್ತು ವಿನಿಮಯ ಕೇಂದ್ರಗಳ ಸಮಿತಿಗಳ ರಚನೆ.

8. ಸಂಶೋಧನೆ ಮತ್ತು ಅಭಿವೃದ್ಧಿಗೆ ಅವಕಾಶ.

9. ಅನಧಿಕೃತ ವಹಿವಾಟಿನ ಸಂದರ್ಭಗಳಲ್ಲಿ ವಶಪಡಿಸಿಕೊಳ್ಳಲು, ದಂಡ ವಿಧಿಸಲು ಅವಕಾಶ.

10. ರಹದಾರಿ ರದ್ದುಪಡಿಸಲು ಅಥವಾ ಅಮಾನತ್ತಿನಲ್ಲಿಡಲು ಅವಕಾಶ.

11. ಬೆಲೆ ಸ್ಥಿರೀಕರಣ ನಿಧಿಯ ಸ್ಥಾಪನೆ.

12. ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಅವಕಾಶ.

ಈ) ವಿಶ್ವಮುಕ್ತ ಮಾರುಕಟ್ಟೆ ಕಾರಣ ಉದಾರೀಕರಣ, ಖಾಸಗೀಕರಣ, ಜಾಗತೀಕರಣದ ಹಿನ್ನೆಲೆಯಲ್ಲಿ ರಾಜ್ಯದ ಸಮಗ್ರ ರೇಷ್ಮೆ ಅಭಿವೃದ್ಧಿಗಾಗಿ ಇದರಲ್ಲಿ ತೊಡಗಿರುವ ಎಲ್ಲಾ ಸಮುದಾಯಗಳ ಪ್ರತಿನಿಧಿಗಳೊಂದಿಗೆ ಸಮಾಲೋಚನೆಯನ್ನು ನಡೆಸಲಾಗಿದ್ದು ಸೂಕ್ತ ತಿದ್ದುಪಡಿಗಳನ್ನು ತರಲು ಉದ್ದೇಶಿಸಲಾಗಿದೆ.

ಕುಂತೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ತೊಂದರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ : 425(637)

ಸದಸ್ಯರ ಹೆಸರು : ಶ್ರೀ ನಂಜುಂಡಸ್ವಾಮಿ ಜಿ.ಎನ್.(ಕೊಳ್ಳೇಗಾಲ)

ಸಚಿವರ ಹೆಸರು-ಪದನಾಮ : ಶ್ರೀ ಎ.ಕೃಷ್ಣಪ್ಪ(ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು)

ಪ್ರಶ್ನೆ

ಅ) ಕುಂತೂರು ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಆಗುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಬಂದಿದ್ದಲ್ಲಿ, ರೈತರ ತೊಂದರೆಗಳನ್ನು ನಿವಾರಿಸಲು ಸರ್ಕಾರ ಏನು ಕ್ರಮ ಕೈಗೊಳ್ಳಲಿದೆ?

ಇ) ಯಾವಾಗ ಸರ್ಕಾರ ಕ್ರಮ ಕೈಗೊಳ್ಳುವುದು?

ಉತ್ತರ

ಅ) ಬಂದಿದೆ.

ಆ ಮತ್ತು ಇ) ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆ, ಕುಂತೂರು ಇದು 2000-01ನೇ ಸಾಲಿಗೆ ಕಬ್ಬು ಖರೀದಿಸಿದ ಬಾಬ್ತು ರೈತರಿಗೆ ಪಾವತಿಸಬೇಕಾಗಿದ್ದ ರೂ.12,18,05,546-00ಗಳನ್ನು ಪಾವತಿಸಲು ವಿಫಲವಾದ ಹಿನ್ನೆಲೆಯಲ್ಲಿ ಸಕ್ಕರೆ ನಿರ್ದೇಶಕರು ಕಬ್ಬು ನಿಯಂತ್ರಣ ಆದೇಶ 1966ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಸದರಿ ಮೊಬಲಗನ್ನು 'ಭೂ ಕಂದಾಯದ ಬಾಕಿ' ರೂಪದಲ್ಲಿ ವಸೂಲು ಮಾಡಿ ರೈತರಿಗೆ ಪಾವತಿಸಲು ದಿ:25-5-01ರಲ್ಲಿ ಆದೇಶ ಹೊರಡಿಸಿ, ಸದರಿ ಮೊಬಲಗನ್ನು ಕಾರ್ಖಾನೆಯಿಂದ ವಸೂಲಿ ಮಾಡಲು ಜಿಲ್ಲಾಧಿಕಾರಿ, ಚಾಮರಾಜನಗರ ಜಿಲ್ಲೆ ಇವರಿಗೆ ಅಧಿಕಾರ ನೀಡಿರುತ್ತಾರೆ. ಈ ಆದೇಶದ ಮೇಲೆಗೆ ಜಿಲ್ಲಾಧಿಕಾರಿಯವರು ಕಾರ್ಖಾನೆಯ ಸಕ್ಕರೆ ದಾಸ್ತಾನನ್ನು ಜಪ್ತಿ ಮಾಡಿ ವಸೂಲಾತಿ ಕ್ರಮ ಜರುಗಿಸಿರುತ್ತಾರೆ.

ಈ ಮಧ್ಯೆ ಕಾರ್ಖಾನೆಯವರು ಸಕ್ಕರೆ ನಿರ್ದೇಶಕರ ದಿ:25-5-01ರ ಆದೇಶದ ವಿರುದ್ಧ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ.28636:2001ನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ಕಾರ್ಖಾನೆಯ ಸಕ್ಕರೆ ಮಾರಾಟದಿಂದ ಬಂದ ಹಣವನ್ನು ರೈತರಿಗೆ ಪಾವತಿಸಲು ತಾತ್ಕಾಲಿಕವಾಗಿ ಆದೇಶಿಸಿದ ಮೇರೆಗೆ ಕಾರ್ಖಾನೆ ಈವರೆಗೆ ರೂ.3.80 ಕೋಟಿ ಪಾವತಿಸಿದ್ದು, ಇನ್ನೂ ರೂ.8.38 ಕೋಟಿ ಪಾವತಿಸಲು ಬಾಕಿ ಇರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ.

ಕಾರ್ಖಾನೆಯು 2000-01ರ ಹಂಗಾಮಿನಲ್ಲಿ ಪೂರ್ಣ ಅವಧಿಗೆ ಕಬ್ಬನ್ನು ನುರಿಸಿರುವುದಿಲ್ಲ. 2001-2002ನೇ ಹಂಗಾಮಿನಲ್ಲಿ ಕಾರ್ಖಾನೆ ಕಬ್ಬು ನುರಿಸುವಿಕೆಯನ್ನು ಇನ್ನೂ ಪ್ರಾರಂಭಿಸಿರುವುದಿಲ್ಲ. ಇದರಿಂದ ಕಾರ್ಖಾನೆ ವ್ಯಾಪ್ತಿಯಲ್ಲಿ ರೈತರು ಬೆಳೆದ ಕಬ್ಬನ್ನು ಸದರಿ ಕಾರ್ಖಾನೆ ನುರಿಸದೆ ರೈತರು ಸಂಕಷ್ಟಕ್ಕೆ ಒಳಗಾಗುವ ಪರಿಸ್ಥಿತಿ ಇದ್ದು, ಇದಕ್ಕೆ ಪರಿಹಾರವಾಗಿ ಈ ಕಾರ್ಖಾನೆಯ ಸಮೀಪದ ಕಾರ್ಖಾನೆಗಳಾದ ಬನ್ನಾರಿ ಅಮ್ಮನ್ ಶುಗರ್ಸ್ ಲಿ., ಶ್ರೀ ಚಾಮುಂಡೇಶ್ವರಿ ಶುಗರ್ಸ್ ಲಿ. ಹಾಗೂ ಶ್ರೀ ಮಹದೇಶ್ವರ ಶುಗರ್ಸ್ ಲಿ. ಇವುಗಳ ಆಡಳಿತ ಮಂಡಳಿಗಳ ಒಂದು ಸಭೆಯನ್ನು ಕರೆದು ಚರ್ಚಿಸಿ, ಶ್ರೀ ಮಹದೇಶ್ವರ ಸಕ್ಕರೆ ಕಾರ್ಖಾನೆ ವ್ಯಾಪ್ತಿಯಲ್ಲಿ ಬೆಳೆದ ಕಬ್ಬನ್ನು ನುರಿಸಲು ತಾತ್ಕಾಲಿಕ ವ್ಯವಸ್ಥೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.